ಅಧ್ಯಾಯ ೫

# ಇಂಡಿಯಾ, ಅದುವೇ ಭಾರತ

“ಭಾರತದಲ್ಲಿ ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಏಕತೆಯನ್ನು ಸಂಪೂರ್ಣವಾಗಿ ಸಾಧಿಸಿತ್ತು. ಹಿಮಾಲಯ ಮತ್ತು ಎರಡು ಸಮುದ್ರಗಳ ನಡುವಿನ ಈ ಎಲ್ಲಾ ಮಾನವಕುಲದ ಮಹೋನ್ನತ ಜೀವನದ ವಿಷಯವಾಗಿದೆ

- ಶ್ರೀ ಅರಬಿಂದೋ



ಚಿತ್ರ ೫.೧. ಈ ಮೇಲಿನ ಚಿತ್ರವು ೨೩೦೦ ವರ್ಷಗಳ ಹಿಂದಿನ ಗ್ರಾಮಭಾರತ (ಸಾಚಿಸ್ತೂಪದ ಉತ್ತರ ಬಾಗಿಲು/ಗೇಟ)

## ಕೆಲವು ಪ್ರಮುಖ ಪ್ರಶ್ನೆಗಳು ?

೧. ಭಾರತವನ್ನು ನಾವು ಹೇಗೆ ಅರ್ಥೈಸುತ್ತೇವೆ?

೨. ಪ್ರಾಚೀನ ಭಾರತದ ಹೆಸರುಗಳನ್ನು ತಿಳಿಸಿ?




ಚಿತ್ರ. ೨. ೨. ಕೆಲವು ನದಿಗಳೊಂದಿಗೆ ಭಾರತೀಯ ಉಪಖಂಡದ ಭೌತಿಕ ನಕ್ಷೆ..

ನಾವಿಂದು ನೋಡುತ್ತಿರುವ ಭಾರತವು ಆಧುನಿಕ ರಾಷ್ಟ್ರವಾಗಿದೆ. ಅದರ ಸ್ವರೂಪ, ಗಡಿ, ರಾಜ್ಯಗಳು ಅರ್ಥೈಸಿಕೊಂಡಿದ್ದೇವೆ ಮತ್ತು ಜನಸಂಖ್ಯೆ ಎಷ್ಟೆಂದು ತಿಳಿದುಕೊಂಡಿದ್ದೇವೆ. ಆದರೆ ೫೦೦ವರ್ಷಗಳ ಹಿಂದೆ, ೨,೦೦೦ವರ್ಷಗಳ ಮೊದಲು ಅಥವಾ ೫,೦೦೦ವರ್ಷಗಳಷ್ಟು ಪ್ರಾಚೀನ ಕಾಲದಲ್ಲಿ ತುಂಬಾ ಬೇರೆಯಾಗಿತ್ತು. ನಾವು ಸಾಮಾನ್ಯವಾಗಿ 'ಭಾರತೀಯ ಉಪಖಂಡ' ಎಂದು ಕರೆಯುವ ವಿಶ್ವದ ಈ ಪ್ರದೇಶವು ಅನೇಕ ವಿಭಿನ್ನ ಹೆಸರುಗಳನ್ನು ಮತ್ತು ಬದಲಾಗುತ್ತಿರುವ ಗಡಿಗಳನ್ನು ಹೊಂದಿದೆ. ಭಾರತದ ಭೂತಕಾಲ ಮತ್ತು ವಿಕಾಸದ ಬಗ್ಗೆ ವಿವಿಧ ದಾಖಲೆಗಳಿಂದ ತಿಳಿಯಬಹುದು. ಬನ್ನಿ ಅನ್ವೇಷಿಸೋಣ

## ಇದರ ಕುರಿತು ಆಲೋಚಿಸಿ

ಈ ಅಧ್ಯಾಯದ ಆರಂಭದಲ್ಲಿ ಭಾರತೀಯ ಉಪಖಂಡದ ಭೌತಿಕ ನಕ್ಷೆಯನ್ನು ಗಮನಿಸಿ; ನೀವು ಕಂಡುಹಿಡಿಯಬಹುದಾದ ಅದರ ಪ್ರಾಕೃತಿಕ ಗಡಿಗಳು ಯಾವುವು ತಿಳಿಸಿ?

ಇಲ್ಲಿನ ದೇಶವಾಸಿಗಳು ಮತ್ತು ಹೊರಗಿನ ಪ್ರವಾಸಿಗರು ಚಾರಿತ್ರಿಕ ಸಂದರ್ಭಗಳಲ್ಲಿ ಭಾರತವನ್ನು ಹಲವು ಹೆಸರುಗಳಿಂದ ಕರೆಯಲಾಗುತ್ತಿದ್ದರು. ಈ ಹೆಸರುಗಳು ಪ್ರಾಚೀನ ಗ್ರಂಥ, ವಿದೇಶಿ ಪ್ರವಾಸಿಗರು ಮತ್ತು ಯಾತ್ರಿಕರ ವಿವರಗಳು ಮತ್ತು ಶಾಸನಗಳಿಂದ ನಮಗೆ ತಿಳಿದುಬರುತ್ತವೆ.

**ದೇಶವಾಸಿಗಳು:** ಒಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸುವ ಜನರು.

### ಭಾರತೀಯರು ಭಾರತಕ್ಕೆ ಹೇಗೆ ಹೆಸರಿಟ್ಟರು:

ಋಗ್ವೇದವು ಭಾರತದ ಅತ್ಯಂತ ಪ್ರಾಚೀನ ಗ್ರಂಥವಾಗಿದೆ.ನಾವು ಅಧ್ಯಾಯ ೭ರಲ್ಲಿ ನೋಡುವಂತೆ ಅದು ಹಲವಾರು ಸಾವಿರ ವರ್ಷಗಳಷ್ಟು ಹಳೆಯದು. ಇದು ಉಪಖಂಡದ ವಾಯುವ್ಯ ಪ್ರದೇಶಕ್ಕೆ 'ಸಪ್ತ ಸಿಂಧವ' ಎಂಬ ಹೆಸರಿಸಿದೆ. ಅಂದರೆ 'ಏಳು ನದಿಗಳ ಭೂಮಿ' ಎಂದರ್ಥ. 'ಸಿಂಧವ' ಎಂಬ ಪದವು 'ಸಿಂಧು' ಎಂಬ ಪದದಿಂದ ಬಂದಿದೆ. ಇದು ಸಿಂಧೂ ನದಿಯನ್ನು ಸೂಚಿಸುತ್ತದೆ, ಅಥವಾ ಕೆಲವೊಮ್ಮೆ ಸಾಮಾನ್ಯವಾಗಿ ನದಿಯನ್ನು ಸಹ ಸೂಚಿಸುತ್ತದೆ.




ಚಿತ್ರ ೫.೩.ಭಾರತೀಯ ಉಪಖಂಡದ ವಾಯುವ್ಯ ಪ್ರದೇಶ

© NCERT not to be republished

ಕಾಲಾಂತರದಲ್ಲಿ ಮುಂದುವರೆದಂತೆ ಭಾರತದ ಇತರ ಭಾಗಗಳ ಹೆಸರುಗಳು ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವುದನ್ನು ನೋಡುತ್ತೇವೆ. ಮಹಾಭಾರತವು ಭಾರತದ ಅತ್ಯಂತ ಪ್ರಸಿದ್ಧ ಗ್ರಂಥಗಳಲ್ಲಿ ಒಂದು. (ನಾವು ಅದರ ಬಗ್ಗೆ 'ನಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಜ್ಞಾನ ಸಂಪ್ರದಾಯಗಳು' ಎಂಬ ವಿಷಯದಲ್ಲಿ ಓದುತ್ತೇವೆ). ಕುತೂಹಲಕಾರಿಯಾಗಿ, ಇದು ಕಾಶ್ಮೀರಾ (ಹೆಚ್ಚು ಕಡಿಮೆಯಾಗಿ ಇಂದಿನ ಕಾಶ್ಮೀರ), ಕುರುಕಕ್ಷೇತ್ರ (ಇಂದಿನ ಹರಿಯಾಣದ ಭಾಗಗಳು), ವಂಗಾ (ಬಂಗಾಳದ ಕೆಲವು ಭಾಗಗಳು), ಪ್ರಾಗಜ್ಯೋತಿಷಾ (ಇಂದಿನ ಅಸ್ಸಾಂ), ಕಚ್ಛಾ (ಇಂದಿನ ಕಚ್), ಕೇರಲ (ಹೆಚ್ಚು ಕಡಿಮೆ ಇಂದಿನ ಕೇರಳ) ಮುಂತಾದ ಪ್ರದೇಶಗಳನ್ನು ಪಟ್ಟಿಮಾಡಬಹುದು.

## ನಾವೀಗ ಅನ್ವೇಷಿಸೋಣ:

ಪುಟ ೭೯ (ಚಿತ್ರ ೫.೪) ರಲ್ಲಿ ನೀಡಲಾದ ಯಾವುದೇ ಪ್ರದೇಶಗಳ ಹೆಸರುಗಳನ್ನು ನೀವು ಗುರುತಿಸಬಲ್ಲೀರಾ? ನೀವು ಕೇಳಿರುವ ಪ್ರದೇಶಗಳ ಹೆಸರುಗಳನ್ನು ಪಟ್ಟಿ ಮಾಡಿ.

ಆದರೆ ಇಡೀ ಭಾರತೀಯ ಉಪಖಂಡಕ್ಕೆ ಒಂದು ಹೆಸರನ್ನು ನಾವು ಯಾವಾಗ ನೋಡುತ್ತೇವೆ? ಪ್ರಾಚೀನ ಭಾರತೀಯ ಪಠ್ಯಗಳನ್ನು ದಿನಾಂಕೀಕರಿಸುವುದು ಕಷ್ಟಕರವಾಗಿರುವುದರಿಂದ, ಇದು ಉತ್ತರಿಸಲು ಸುಲಭವಾದ ಪ್ರಶ್ನೆಯಲ್ಲ. ಮಹಾಭಾರತವು 'ಭರತವರ್ಷ' ಮತ್ತು 'ಜಂಬುದ್ವೀಪ' ಎಂಬ ಪದಗಳನ್ನು ಬಳಸುತ್ತದೆ, ಮತ್ತು ವಿದ್ವಾಂಸರು ಸಾಮಾನ್ಯವಾಗಿ ಈ ಸುದೀರ್ಘ ಮಹಾಕಾವ್ಯವನ್ನು ಕ್ರಿ.ಪೂ ಕೆಲವು ಶತಮಾನಗಳಿಂದ ಬರೆಯಲಾಗಿದೆ ಎಂದು ಒಪ್ಪುತ್ತಾರೆ.

ಮೊದಲ ಪದ 'ಭರತವರ್ಷ' ಸ್ಪಷ್ಟವಾಗಿ ಇಡೀ ಉಪಖಂಡಕ್ಕೆ ಅನ್ವಯಿಸಿ ಹೇಳಿದಂತಿದೆ. ಹಲವಾರು ನದಿಗಳು ಮತ್ತು ಜನರ ಹೆಸರುಗಳನ್ನು ಒಳಗೊಂಡ ಅರ್ಥವಿದೆ. 'ಭರತವರ್ಷ' ಎಂದರೆ 'ಭರತನ ದೇಶ' ಎಂದರ್ಥ. 'ಭರತ' ಎಂಬುದು ಮೊದಲು ಕಾಣಿಸಿಕೊಳ್ಳುವ ಹೆಸರು. ಋಗ್ವೇದದಲ್ಲಿ ಜನರ ಪ್ರಮುಖ ವೈದಿಕ ಗುಂಪುಗಳಲ್ಲಿ ಒಂದನ್ನು ಸೂಚಿಸುತ್ತದೆ. ನಂತರದ ಸಾಹಿತ್ಯದಲ್ಲಿ 'ಭರತ' ಎಂಬ ಹೆಸರಿನ ಹಲವಾರು ರಾಜರನ್ನು ಉಲ್ಲೇಖಿಸಲಾಗಿದೆ.

ಎರಡನೇ ಪದವಾದ 'ಜಂಬೂದ್ವೀಪ' ಎಂದರೆ 'ಜಾಮೂನು ಮರದ ಹಣ್ಣಿನ ದ್ವೀಪ'. ಇದು ಭಾರತದಲ್ಲಿ ಸಾಮನ್ಯವಾಗಿ ಬೆಳೆಯುವ ಸ್ಥಳೀಯ ಮರವಾಗಿದೆ. ಇದನ್ನು 'ಜಂಬುಲ್ ಮರ', 'ಮಲಬಾರ್ ಪ್ಲಮ್ ಮರ' ಎಂದೂ ಕರೆಯಲಾಗುತ್ತದೆ. 'ಜಂಬೂದ್ವೀಪ' ಎಂದರೆ ಭಾರತೀಯ ಉಪಖಂಡ ಎಂದರ್ಥ.

ವಾಸ್ತವವಾಗಿ, ನಾವು ಭಾರತೀಯ ಚಕ್ರವರ್ತಿಯಿಂದ ಉತ್ತಮ ಮಾಹಿತಿಯನ್ನು ತಿಳಿಯುತ್ತೇವೆ. ಅವನ ಹೆಸರು ಅಶೋಕ. ಅವನನ್ನು ಕುರಿತು ನಂತರದಲ್ಲಿ ನೋಡೋಣ. ಸದ್ಯಕ್ಕೆ ಅವನ ದಿನಾಂಕವನ್ನು ಸುಮಾರು ಕ್ರಿ.ಪೂ ೨೫೦ ಎಂದು ತೆಗೆದುಕೊಳ್ಳಬಹುದು. ನಾವು ತಿಳಿದಿರುವಂತೆ ಹಲವು ಶಿಲಾಶಾಸನಗಳನ್ನು ಹಾಕಿಸಿ ದಾಖಲೆಗಳನ್ನು ನಮಗೆ ಬಿಟ್ಟುಹೋದರು. ಅವುಗಳಲ್ಲಿ ಒಂದರಲ್ಲಿ, ಅವರು' ಜಂಬೂದ್ವೀಪ' ಎನ್ನುವುದನ್ನು ಸಮಗ್ರ



© NCERT not to be republished




© NCERT not to be republished

ಚಿತ್ರ ೫.೪. ಮಹಾಭಾರತದಲ್ಲಿ ಪಟ್ಟಿ ಮಾಡಲಾದ ಕೆಲವು ಪ್ರದೇಶಗಳ ನಕ್ಷೆ. (ಅವುಗಳಲ್ಲಿ ಅನೇಕವನ್ನು ಪಠ್ಯದಲ್ಲಿ ರಾಜ್ಯಗಳು ಎಂದು ಉಲ್ಲೇಖಿಸಲಾಗಿದೆ.) ನೀವು ಆ ಪ್ರದೇಶಗಳನ್ನು ನೆನಪಿಟ್ಟುಕೊಳ್ಳುವ ಅಗತ್ಯವಿಲ್ಲ, ಆದರೆ ಅವು ಉಪಖಂಡದ ಸಂಪೂರ್ಣ ಭೌಗೋಳಿಕತೆಯನ್ನು ಹೇಗೆ ಒಳಗೊಂಡಿವೆ ಎಂಬುದನ್ನು ಗಮನಿಸಿ.

ಭಾರತಕ್ಕೆ ಅನ್ವಯಿಸಿ ಹೇಳಿದಂತಿದೆ. ಆ ಸಮಯದಲ್ಲಿ ಭಾರತವು ಇಂದಿನ ಬಾಂಗ್ಲಾದೇಶ, ಪಾಕಿಸ್ತಾನಗಳಂತೆ ಅಫಘಾನಿಸ್ತಾನದ ಕೆಲವು ಭಾಗಗಳನ್ನು ಒಳಗೊಂಡಿತ್ತು.

ಕೆಲವು ಶತಮಾನಗಳ ನಂತರ, 'ಭಾರತ' ಸಾಮಾನ್ಯವಾಗಿ ಭಾರತೀಯ ಉಪಖಂಡಕ್ಕೆ ಬಳಸಲಾಗುವ ಹೆಸರಾಯಿತ್ತು. ಉದಾಹರಣೆಗೆ, ಪ್ರಾಚೀನ ಪರ್ಯವಾದ ವಿಷ್ಣು ಪುರಾಣದಲ್ಲಿ, ನಾವು ಓದುತ್ತೇವೆ:

ಉತ್ತರಂ ಎತ್ ಸಮುದ್ರಸ್ಯ ಹಿಮದ್ರಶ್ಚೈವ
ದಕ್ಷಿಣಾಂ ವರಾಸಮ್ ತದ್ ಭಾರತಂ ನಾಮ...
ಉತ್ತರದಲ್ಲಿ ಸಾಗರ ಮತ್ತು ದಕ್ಷಿಣದಲ್ಲಿ ಹಿಮಭರಿತ
ಪರ್ವತಗಳ ಇರುವ ದೇಶವನ್ನು ಭಾರತ ಎಂದು
ಕರೆಯಲಾಗುತ್ತದೆ."

'ಭಾರತ' ಎಂಬ ಈ ಹೆಸರು ಇಂದಿಗೂ ಬಳಕೆಯಲ್ಲಿದೆ. ಉತ್ತರ ಭಾರತದಲ್ಲಿ, ಇದನ್ನು ಸಾಮಾನ್ಯವಾಗಿ 'ಭಾರತ್' ಎಂದು ಬರೆಯಲಾಗುತ್ತದೆ, ಆದರೆ ದಕ್ಷಿಣ ಭಾರತದಲ್ಲಿ, ಇದನ್ನು ಹೆಚ್ಚಾಗಿ 'ಭಾರತಂ' ಎಂದು ಬರೆಯಲಾಗುತ್ತದೆ.

## ಅದರ ಕುರಿತು ಆಲೋಚಿಸಿ

ನೀವು 'ಹಿಮಭರಿತ ಪರ್ವತಗಳನ್ನು' ಗುರುತಿಸಿದ್ದೀರಾ? ಭಾರತದ ಈ ಸಂಕ್ಷಿಪ್ತ ವಿವರಣೆ ಸರಿಯಾಗಿದೆಯೇ ಎಂದು ನೀವು ಭಾವಿಸುತ್ತೀರಾ?

ಭಾರತಕ್ಕೆ ದೇಶದ ವಿವಿಧ ಭಾಗಗಳಲ್ಲಿ ಇದೇ ರೀತಿಯ ಅರ್ಥವನ್ನು ಅಳವಡಿಸಿಕೊಂಡಿವೆ ಎಂಬುವುದು ಆಸಕ್ತಿದಾಯಕವಾಗಿದೆ. ಉದಾಹರಣೆಗೆ ಸುಮಾರು ೨,೦೦೦ ವರ್ಷಗಳ ಹಿಂದಿನ ಪ್ರಾಚೀನ ತಮಿಳು ಸಾಹಿತ್ಯದ ಒಂದು ಕಾವ್ಯವು "ದಕ್ಷಿಣದಲ್ಲಿ [ಕೇಪ] ಕುಮಾರಿಯಿಂದ, ಉತ್ತರದಲ್ಲಿ ದೊಡ್ಡ ಪರ್ವತದಿಂದ, ಪೂರ್ವದಲ್ಲಿ ಮತ್ತು ಪಶ್ಚಿಮದಲ್ಲಿ ಸಾಗರಗಳಿಂದ..." ಎಂಬ ಉಲ್ಲೇಖವಿದು ಆ ರಾಜನ ಹೆಸರನ್ನು ಹೊಗಳುತ್ತದೆ. ನೀವು ಈಗ 'ಉತ್ತರದ ದೊಡ್ಡ ಪರ್ವತ' ಯಾವುದೆಂದು ಗುರುತಿಸಬಹುದು. 'ಕೇಪ ಕುಮಾರಿ'ಯನ್ನು ಗುರುತಿಸುವುದು ಕಷ್ಟವಾಗಲಾರದು. ಪ್ರಾಚೀನ ಭಾರತೀಯರು ತಮ್ಮ ಭೌಗೋಳಿಕತೆಯನ್ನು ಚೆನ್ನಾಗಿ ತಿಳಿದಿದ್ದರು ಎಂದು ಇದರಿಂದ ತೋರುತ್ತದೆ!

© NCERT not to be republished

## ಇದನ್ನು ತಪ್ಪಿಸಬೇಡಿ

ಭಾರತೀಯ ಸಂವಿಧಾನವನ್ನು ಮೊದಲು ಇಂಗ್ಲಿಷ್‌ನಲ್ಲಿ ಬರೆಯಲಾಗಿದ್ದು, ಆರಂಭದಲ್ಲಿಯೇ 'ಇಂಡಿಯಾ, ಅದುವೇ ಭಾರತ್' ಎಂಬ ನುಡಿಗಟ್ಟನ್ನು ಬಳಸುತ್ತದೆ. ಅಂತೆಯೇ, ಸಂವಿಧಾನದ ಹಿಂದಿ ಆವೃತ್ತಿಯು ಇದನ್ನು 'ಭರತ್ ಅರ್ಥಾರ್ಥ ಇಂಡಿಯಾ' ಉಲ್ಲೇಖಿಸುತ್ತದೆ.

## ನಾವೀಗ ಅನ್ವೇಷಿಸೋಣ

ಚಿತ್ರ ೫.೫ (ಪುಟ ೮೨) ರಲ್ಲಿ ಭಾರತದ ಮೂಲ ಸಂವಿಧಾನದ ಮೊದಲ ಪುಟದ ಈ ಪುನರುತ್ಪಾದನೆಯಲ್ಲಿ, ನೀವು 'ಇಂಡಿಯಾ, ಅದುವೇ ಭಾರತ' ಎಂಬ ನುಡಿಗಟ್ಟನ್ನು ಕಂಡುಹಿಡಿಯಬಹುದೇ?

**ಸಂವಿಧಾನ:**
ಒಂದು ದಾಖಲೆ ಅದು ಮೂಲ ತತ್ವಗಳನ್ನು ವಿವರಿಸುತ್ತದೆ ಮತ್ತು ರಾಷ್ಟ್ರದ ಕಾನೂನುಗಳು. ೬ ನೇ ತರಗತಿಯಲ್ಲಿ ಅಧ್ಯಯನ ಮಾಡುವ ಭಾರತೀಯ ಸಂವಿಧಾನವು ೧೯೫೦ರಲ್ಲಿ ಜಾರಿಗೆ ಬಂದಿತು.

## ಭಾರತಕ್ಕೆ ವಿದೇಶಿಯರು ಹೇಗೆ ಹೆಸರಿಟ್ಟರು:

ಭಾರತವನ್ನು ಉಲ್ಲೇಖಿಸಿದ ಮೊದಲ ವಿದೇಶಿಯರು ಇರಾನಿನ ಪ್ರಾಚೀನ ನಿವಾಸಿಗಳಾದ ಪರ್ಷಿಯನ್ನರು. ಕ್ರಿ.ಪೂ. ೬ ನೇ ಶತಮಾನದಲ್ಲಿ ಪರ್ಷಿಯನ್ ಚಕ್ರವರ್ತಿಯು ಸೈನಿಕರ ಕಾರ್ಯಾಚರಣೆಯನ್ನು ಪ್ರಾರಂಭಿಸಿದನು. ಸಿಂಧೂ ನದಿಯ ಪ್ರದೇಶದ ಮೇಲೆ ನಿಯಂತ್ರಣವನ್ನು ಸಾಧಿಸಿದರು. ಇದನ್ನು ಮೊದಲು 'ಸಿಂಧು' ಎಂದು ಕರೆಯಲಾಗುತ್ತಿತ್ತು. ಆದ್ದರಿಂದ ಪರ್ಷಿಯನ್ನರು ತಮ್ಮ ಆರಂಭಿಕ ದಾಖಲೆ ಮತ್ತು ಶಿಲಾಶಾಸನಗಳಲ್ಲಿ ಭಾರತವನ್ನು 'ಹಿಂದ್', 'ಹಿದೂ' ಅಥವಾ 'ಹಿಂದೂ' ಎಂದು ಉಲ್ಲೇಖಿಸಿದ್ದಾರೆ. ಅವು 'ಸಿಂಧು' ಎನ್ನುವುದರ ರೂಪಾಂತರಗಳಾಗಿವೆ. (ಪ್ರಾಚೀನ ಪರ್ಷಿಯನ್ ಭಾಷೆಯಲ್ಲಿ 'ಹಿಂದೂ' ಎಂಬುದು ಸಂಪೂರ್ಣವಾಗಿ ಭೌಗೋಳಿಕ ಪದವಾಗಿದೆ; ಅದು ಇಲ್ಲಿ ಹಿಂದೂ ಧರ್ಮವನ್ನು ಸೂಚಿಸುವುದಿಲ್ಲ.)

ಈ ಪರ್ಷಿಯನ್ ದಾಖಲೆಗಳ ಆಧಾರದ ನಂತರ ಪ್ರಾಚೀನ ಗ್ರೀಕರು ಈ ಪ್ರದೇಶವನ್ನು 'ಇಂಡೋಇ' ಅಥವಾ 'ಇಂಡಿಕ್' ಎಂದು ಹೆಸರಿಸಿದರು. ಅವರು 'ಹಿಂದೂ'ನ ಆರಂಭಿಕ ಅಕ್ಷರ 'ಎಚ್' ಅನ್ನು ಕೈಬಿಟ್ಟರು. ಏಕೆಂದರೆ ಈ ಅಕ್ಷರವು ಅವರ ಗ್ರೀಕ್ ಭಾಷೆಯಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ.

**ಸಿಂಧು → ಹಿಂದು → ಇಂಡೋಯಿ / ಇಂಡಿಕೆ**

ಪ್ರಾಚೀನ ಚೀನೀಯರು ಭಾರತದೊಂದಿಗೆ ಸಂವಹನ ನಡೆಸಿದರು. ಹಲವಾರು ಗ್ರಂಥಗಳಲ್ಲಿ, ಅವರು ಭಾರತವನ್ನು 'ಯಿಂಟು' ಅಥವಾ 'ಯಿಂದು' ಎಂದು ಉಲ್ಲೇಖಿಸಿದ್ದಾರೆ. ಈ ಪದವು ಮೂಲತಃ 'ಸಿಂಧು' ಎಂಬ ಪದದಿಂದ ಬಂದಿದೆ, ಈ ಕೆಳಗಿನ ರೀತಿಯಲ್ಲಿ:

**ಸಿಂಧು → ಹಿಂದು → ಇಂದು → ಯಿಂದು**

© NCERT not to be republished



Part I

The Union and its Territory

*Name and territory of the Union.*

1. (1) India, that is Bharat, shall be a Union of States.

(2) The States and the territories thereof shall be the States and their territories specified in Parts A, B and C of the First Schedule.

(3) The territory of India shall comprise—

(a) the territories of the States;

(b) the territories specified in Part D of the First Schedule; and

(c) such other territories as may be acquired.

*Admission or establishment of new States.*

2. Parliament may by law admit into the Union, or establish, new States on such terms and conditions as it thinks fit.

*Formation of new States and alteration of areas, boundaries or names of existing States.*

3. Parliament may by law—

(a) form a new State by separation of territory from any State or by uniting two or more States or parts of States or by uniting any territory to a part of any State;

(b) increase the area of any State;

(c) diminish the area of any State;

(d) alter the boundaries of any State;

(e) alter the name of any State:

Provided that no Bill for the purpose shall be introduced in either House of Parliament except on the recommendation of the President and unless, where the proposal contained in the Bill affects

1

© NCERT not to be republished

ಚಿತ್ರ ೫.೫. ಭಾರತದ ಸಂವಿಧಾನದ ಮೊದಲ ಪುಟ (ಮೂಲ: ಭಾರತದ ಮೂಲ ಸಂವಿಧಾನದ ಮರುಮುದ್ರಣ, ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ, ೨೦೦೦)

## ಇದನ್ನು ತಪ್ಪಿಸಬೇಡಿ

ಕ್ಸುಎನ್‌ಝಾಂಗ್ (ಹಿಂದೆ ಹ್ಯುಯೆನತ್ಸಾಂಗ್, ಹ್ಸುವಾನ್ ತ್ಸಾಂಗ್ ಎಂದು ಉಚ್ಚರಿಸಲಾಗುತ್ತಿತ್ತು) ಸಾ.ಶ ೭ನೇ ಶತಮಾನದಲ್ಲಿ ಚೀನಾದಿಂದ ಭಾರತಕ್ಕೆ ಪ್ರವಾಸ ಕೈಗೊಂಡಿದ್ದನು. ಅವರು ಭಾರತದ ಹಲವು ಪ್ರದೇಶಗಳಿಗೆ ಭೇಟಿ ನೀಡಿದರು. ಇಲ್ಲಿನ ಧರ್ಮ ಪಂಡಿತರನ್ನು ಭೇಟಿಯಾದರು. ಬೌದ್ಧ ಗ್ರಂಥಗಳನ್ನು ಸಂಗ್ರಹಿಸಿದನು. ಭಾರತದಿಂದ ೧೭ ವರ್ಷಗಳ ನಂತರ ಚೀನಾಕ್ಕೆ ಹಿಂತಿರುಗಿದರು. ಅಲ್ಲಿಗೆ ಹೋದನಂತರ ತಮ್ಮೊಂದಿಗೆ ತೆಗೆದುಕೊಂಡು ಹೋದ ಹಸ್ತಪ್ರತಿಗಳನ್ನು ಸಂಸ್ಕೃತದಿಂದ ಚೀನಾ ಭಾಷೆಗೆ ಅನುವಾದಿಸಿದರು. ಶತಮಾನಗಳಿಂದ ಹಲವಾರು ಚೀನಿ ದಾರ್ಶನಿಕರು ಭಾರತಕ್ಕೆ ಭೇಟಿ ನೀಡಿತ್ತಿದ್ದಾರೆ.



'ಸಿಂಧು' ಎಂಬ ಪದದಿಂದ ಬಂದ ಮತ್ತೊಂದು ಚೀನಿ ಪದವೆಂದರೆ 'ಟಿಯಾಂಜು'; ಆದರೆ ಈ ಪದವನ್ನು 'ಸ್ವರ್ಗದ ಅಧಿಪತಿ' ಎಂದು ಅರ್ಥಮಾಡಿಕೊಳ್ಳಬಹುದು. ಇದು ಪ್ರಾಚೀನ ಚೀನಿಯರು 'ಬುದ್ಧನ ಜನ್ಮಭೂಮಿ' ಭಾರತದ ಬಗ್ಗೆ ಹೊಂದಿದ್ದ ಗೌರವವನ್ನು ಪ್ರತಿಬಿಂಬಿಸುತ್ತದೆ.

ಇತ್ತೀಚಿನ 'ಹಿಂದೂಸ್ತಾನ್' ಎಂಬ ಪದದ ಬಗ್ಗೆ ನಿಮಗೆ ಸಾಕಷ್ಟು ತಿಳಿದಿರುತ್ತದೆ. ಆದರೆ ಇದನ್ನು ಮೊದಲು ೧,೮೦೦ವರ್ಷಗಳ ಹಿಂದೆಯೇ ಪರ್ಷಿಯನ್ ಶಾಸನದಲ್ಲಿ ಬಳಸಲಾಗಿದೆ ಎಂದು ನಿಮಗೆ ತಿಳಿದಿರಲಾರದು. ನಂತರ ಭಾರತೀಯ ಉಪಖಂಡವನ್ನು ವಿವರಿಸಲು ಭಾರತದ ಮೇಲೆ ಮಾಡಿದ ಹೆಚ್ಚಿನ ಆಕ್ರಮಣಕಾರರು ಬಳಸಿದ ಪದವಾಯಿತು.

## ನಾವೀಗ ಅನ್ವೇಷಿಸೋಣ

ಈ ಪಟ್ಟಿಯಲ್ಲಿರುವ ಭಾರತದ ವಿವಿಧ ಹೆಸರುಗಳನ್ನು ತುಂಬಿ ಪೂರ್ಣಗೊಳಿಸಬಲ್ಲಿರಾ?

| | |
|---|---|
| ಪರ್ಷಿಯನ್ | |
| ಗ್ರೀಕ್ | |
| ಲ್ಯಾಟಿನ್ | ಇಂಡಿಯಾ |
| ಚೈನೀಸ್ | |
| ಅರಬಿಕ್ ಮತ್ತು ಪರ್ಷಿಯನ್ | |
| ಆಂಗ್ಲ | ಇಂಡಿಯಾ |
| ಫ್ರೆಂಚ್ | ಇಂಡೆ |

© NCERT not to be republished

## ನಾವು ಮುಂದುವರಿಯುವ ಮೊದಲು ...

- ಭಾರತವು ಒಂದು ಪ್ರಾಚೀನ ಪ್ರದೇಶವಾಗಿದೆ. ಅದರ ಇತಿಹಾಸದಲ್ಲಿ ಹಲವು ಹೆಸರನ್ನು ಹೊಂದಿದೆ.
- ಭಾರತದ ಪ್ರಾಚೀನ ದೇಶವಾಸಿಗಳು ನೀಡಿದ ಹೆಸರುಗಳಲ್ಲಿ 'ಜಂಬುದ್ವೀಪ' ಮತ್ತು 'ಭಾರತ' ಸೇರಿವೆ. ಎರಡನೆಯದು ಕಾಲಾಂತರದಲ್ಲಿ ವ್ಯಾಪಕವಾಗಿ ಪ್ರಸಾರವಾಯಿತು ಮತ್ತು ಹೆಚ್ಚಿನ ಭಾರತೀಯ ಭಾಷೆಗಳಲ್ಲಿ ಭಾರತದ ಹೆಸರು ಬಳಕೆಯಾಗಿದೆ.
- ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಅಥವಾ ದಾಳಿಕೋರರು ಹೆಚ್ಚಾಗಿ ಸಿಂಧೂ ಅಥವಾ ಸಿಂಧೂ ನದಿಯಿಂದ ಪಡೆದ ಹೆಸರುಗಳನ್ನು ಅಳವಡಿಸಿಕೊಂಡರು; ಇದು 'ಹಿಂದೂ', 'ಇಂದೊಯಿ' ಮತ್ತು ಅಂತಿಮವಾಗಿ 'ಇಂಡಿಯಾ' ಎಂಬ ಹೆಸರುಗಳಿಗೆ ಕಾರಣವಾಯಿತು..

## ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

೧. ಅಧ್ಯಾಯದ ಆರಂಭದಲ್ಲಿನ ಉಲ್ಲೇಖದ ಅರ್ಥವೇನೆಂದು ಚರ್ಚಿಸಿ.

೨. ಸರಿ ಅಥವಾ ತಪ್ಪೋ?

- ಋಗ್ವೇದವು ಭಾರತದ ಸಂಪೂರ್ಣ ಭೌಗೋಳಿಕತೆಯನ್ನು ವಿವರಿಸುತ್ತದೆ.
- ವಿಷ್ಣು ಪುರಾಣ ಇಡೀ ಉಪಖಂಡವನ್ನು ವಿವರಿಸುತ್ತದೆ.
- ಅಶೋಕನ ಕಾಲದಲ್ಲಿ, 'ಜಂಬುದ್ವೀಪ'ವು ಇಂದಿನ ಭಾರತ, ಅಫ್ಘಾನಿಸ್ತಾನ, ಬಾಂಗ್ಲಾದೇಶ ಮತ್ತು ಪಾಕಿಸ್ತಾನದ ಕೆಲವು ಭಾಗಗಳನ್ನು ಒಳಗೊಂಡಿತ್ತು.
- ಮಹಾಭಾರತವು ಕಾಶ್ಮೀರ, ಕಚ್ ಮತ್ತು ಕೇರಳ ಸೇರಿದಂತೆ ಅನೇಕ ಪ್ರದೇಶಗಳನ್ನು ಪಟ್ಟಿ ಮಾಡುತ್ತದೆ.
- 'ಹಿಂದೂಸ್ತಾನ್' ಎಂಬ ಪದವು ಮೊದಲು ೨,೦೦೦ವರ್ಷಗಳ ಹಿಂದೆ ಗ್ರೀಕ್ ಶಾಸನದಲ್ಲಿ ಕಾಣಿಸಿಕೊಂಡಿತು.
- ಪ್ರಾಚೀನ ಪರ್ಷಿಯನ್ ಭಾಷೆಯಲ್ಲಿ, 'ಹಿಂದೂ' ಎಂಬ ಪದವು ಹಿಂದೂ ಧರ್ಮವನ್ನು ಸೂಚಿಸುತ್ತದೆ.
- 'ಇಂಡಿಯಾ' ಎಂಬುದು ವಿದೇಶಿ ಪ್ರಯಾಣಿಕರು ಭಾರತಕ್ಕೆ ನೀಡಿದ ಹೆಸರು.

೩. ನೀವು ಸುಮಾರು ೨,೦೦೦ವರ್ಷಗಳ ಹಿಂದೆ ಜನಿಸಿದ್ದರೆ ಮತ್ತು ನಮ್ಮ ದೇಶಕ್ಕೆ ಹೆಸರಿಡುವ ಅವಕಾಶ ಸಿಕ್ಕಿದ್ದರೆ, ನೀವು ಯಾವ ಹೆಸರು ಅಥವಾ ಹೆಸರುಗಳನ್ನು ಆಯ್ಕೆ ಮಾಡಿತ್ತಿದ್ದೀರಿ, ಮತ್ತು ಏಕೆ? ನಿಮ್ಮ ಕಲ್ಪನಾ ಶಕ್ತಿಯನ್ನು ಬಳಸಿ!

೪. ಪ್ರಾಚೀನ ಕಾಲದಲ್ಲಿ ವಿಶ್ವದ ವಿವಿಧ ಭಾಗಗಳಿಂದ ಜನರು ಭಾರತಕ್ಕೆ ಏಕೆ ಪ್ರಯಾಣಿಸುತ್ತಿದ್ದರು? ಅಂತಹ ದೀರ್ಘ ಪ್ರಯಾಣಗಳನ್ನು ಕೈಗೊಳ್ಳುವಲ್ಲಿ ಅವರ ಪ್ರೇರಣೆಗಳು ಯಾವುವು? (ಸುಳಿವು: ಕನಿಷ್ಠ ನಾಲ್ಕು ಅಥವಾ ಐದು ಪ್ರೇರಣೆಗಳು ಇರಬಹುದು)

© NCERT not to be republished